

ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ವಿನಿ ಪೊನ್ನಪ್ಪ

## ಬೆಂಗಳೂರು ಕ್ರೀಡಾಜಾಲ

‘80ರ ದಶಕದಲ್ಲಿ ನಾನು ಬ್ಯಾಡ್ಮಿಂಟನ್ ಆಡಲು ಶುರು ಮಾಡಿದಾಗ ಬೆಂಗಳೂರಿನಲ್ಲಿ ಈ ಆಟವು ಅಷ್ಟೊಂದು ಜನಪ್ರಿಯವಾಗಿರಲಿಲ್ಲ. ಆದ್ದರಿಂದ ಕೋಚಿಂಗ್ ಸೌಲಭ್ಯಗಳ ಕೊರತೆಯೂ ಇತ್ತು. ಒಂದೊಮ್ಮೆ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಗೆದ್ದು ಬಂದ ನಂತರ ಎಲ್ಲವೂ ಬದಲಾಯಿತು. ಇವತ್ತು ಕರ್ನಾಟಕವೂ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡುತ್ತಿದೆ’ – ಬ್ಯಾಡ್ಮಿಂಟನ್ ತಾರೆ ಪ್ರಕಾಶ್ ಪಡುಕೋಣೆ ಅವರು ವೆಬ್ ವಾಹಿನಿಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದ ಮಾತುಗಳಿವು. ಅದು ನಿಜವೂ ಕೂಡ ಇವತ್ತು ಬ್ಯಾಡ್ಮಿಂಟನ್ ತರಬೇತಿ ಮತ್ತು ಆಟದಲ್ಲಿ ಹೈದರಾಬಾದ್‌ನೊಂದಿಗೆ ನೇರ ಪೈಪೋಟಿ ನಡೆಸುತ್ತಿರುವ ಊರು ಬೆಂಗಳೂರು. ಅನೂಪ್ ಶ್ರೀಧರ್, ಅಶ್ವಿನಿ ಪೊನ್ನಪ್ಪ, ಅರವಿಂದ್ ಅವರಂತಹ ಶ್ರೇಷ್ಠ ಆಟಗಾರರು ಇಲ್ಲಿ ಬೆಳೆದಿದ್ದಾರೆ.

ಬ್ಯಾಡ್ಮಿಂಟನ್ ತರಬೇತಿ ಕೇಂದ್ರಗಳು ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಕೂಡ ತನ್ನದೇ ಆದ ಅಕಾಡೆಮಿಯನ್ನು ಹೊಂದಿದೆ. ಅಂತರರಾಷ್ಟ್ರೀಯ ದರ್ಜೆ ಕೋಚ್ ವಿಮಲ್ ಕುಮಾರ್ ಅವರ ಬಳಿ ಸೈನಾ ನೆಹ್ವಾಲ್ ಅವರು ಕೆಲಕಾಲ ಇಲ್ಲಿ ತರಬೇತಿ ಪಡೆದಿದ್ದರು. ಜೂನಿಯರ್ ತರಬೇತಿ ಶಿಬಿರಗಳು ನಿರಂತರವಾಗಿ ನಡೆಯುತ್ತಿರುತ್ತವೆ. ನವಪ್ರತಿಭೆ ಲಕ್ಷ್ಯ ಸೇನ್ ಕೂಡ ಇಲ್ಲಿ ವಿಶೇಷ ತರಬೇತಿ ಪಡೆದಿದ್ದರು. ಖಾಸಗಿ ಸಹಭಾಗಿತ್ವದಲ್ಲಿ ಕೆಲವು ಪ್ರೋತ್ಸಾಹ ಧನ ಯೋಜನೆಗಳು ಇರುವುದರಿಂದ ಬೇರೆ ಭಾಗದ ಮಕ್ಕಳು ಇಲ್ಲಿಗೆ ಬಂದು ತರಬೇತಿ ಪಡೆಯುತ್ತಿದ್ದಾರೆ. ಧಾರವಾಡದ ಅಭಿಷೇಕ್ ಯಲಿಗಾರ್, ಹೃಷಿಕೇಶ್ ಯಲಿಗಾರ್ ಸಹೋದರರು ಇಲ್ಲಿಗೆ ಬಂದು ಹಲವು ವರ್ಷಗಳಿಂದ ತರಬೇತಿ ಪಡೆಯುತ್ತಿದ್ದಾರೆ. ಇದೀಗ ಕೆಲವು ಸೂಪರ್ ಸರಣಿಗಳಲ್ಲಿ ಆಡಲು ಅರ್ಹತೆ ಗಿಟ್ಟಿಸಿಕೊಳ್ಳುತ್ತಿದ್ದಾರೆ. ದಶಕದಿಂದ ಹಿಂದೆ ಇಲ್ಲಿಗೆ ಬಂದು ತರಬೇತಿ ಪಡೆದಿದ್ದ ಹುಬ್ಬಳ್ಳಿಯ ಮೋಹಿತ್ ಕಾಮತ್ ಈಗ ಅಕಾಡೆಮಿಯೊಂದರಲ್ಲಿ ಹಿರಿಯ ತರಬೇತುದಾರರಾಗಿ ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

## ಐಪಿಎಲ್ ಫ್ರಾಂಚೈಸಿಗಳಿಗೆ ಲಾಭ?

ಬಿಸಿಸಿಐ ನೇರಪ್ರಸಾರದಿಂದ ಸಿಗುವ ಲಾಭವನ್ನು ಫ್ರಾಂಚೈಸಿಗಳಿಗೆ ಹಂಚುತ್ತದೆ. ಇದರ ಜೊತೆಗೆ ಟಿಕೆಟ್ ಮಾರಾಟದಲ್ಲೂ ಫ್ರಾಂಚೈಸಿಗಳಿಗೆ ಹೆಚ್ಚಿನ ಪಾಲು ಸಿಗುತ್ತದೆ. ಆತಿಥೇಯ ಮೈದಾನದಲ್ಲಿ ಪಂದ್ಯ ನಡೆದರೆ ಶೇ.80ರಷ್ಟು ಹಣ ಫ್ರಾಂಚೈಸಿಗೆ ಸಿಗುತ್ತದೆ. ಇನ್ನು ಪ್ರಾಯೋಜಕರಿಗೂ ಇಲ್ಲಿ ಭರ್ಜರಿ ಪ್ರಚಾರ ದೊರೆಯುತ್ತದೆ. ತಮ್ಮ ಉತ್ಪನ್ನಗಳಿಗೆ ದೊಡ್ಡ ಮಾರುಕಟ್ಟೆ ಸಿಗುತ್ತದೆ. ಬೌಂಡರಿ, ಸಿಕ್ಸರ್, ಗರಿಷ್ಠ ಸಿಕ್ಸರ್ ಹೊಡೆದವರಿಗೆ ಪ್ರಶಸ್ತಿಯನ್ನು ಪ್ರಾಯೋಜಕರು ನೀಡುತ್ತಾರೆ. ಮೂರನೇ ಅಂಪೈರ್ ತೀರ್ಪಿನಲ್ಲೂ ಪ್ರಾಯೋಜಕರ ಲೋಗೋ ಇರುತ್ತದೆ. ಐಪಿಎಲ್ ಅನ್ನು ಹೆಚ್ಚು ಜನ ವೀಕ್ಷಿಸುವ ಕಾರಣ ಕಂಪೆನಿಗಳಿಗೂ ಚೆನ್ನಾಗಿ ಪ್ರಚಾರ ಸಿಗುತ್ತದೆ.